ಬೆಂಗಳೂರು ಕೃಷಿ ವಿವಿಗೆ 11ನೇ ಸ್ಥಾನ

ಬೆಂಗಳೂರು: ಬೆಂಗಳೂರು ಕೃಷಿ ವಿವಿ (ಯುಎಎಸ್-ಬಿ) ಕರ್ನಾಟಕದ ಕೃಷಿ ಮತ್ತು ಸಂಬಂಧಿತ ವಿವಿಗಳ ಪೈಕಿ ಮೊದಲನೇ ಸ್ಥಾನವನ್ನು ಕಾಯ್ದುಕೊಂಡಿದ್ದು, ದೇಶದ 107 ಅಖಿಲ ಭಾರತ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳ ಪೈಕಿ, 11ನೇ ಸ್ಥಾನವನ್ನು ಪಡೆದುಕೊಂಡಿದೆ. 'ಯುಎಎಸ್-ಬಿ' ದೇಶದ 100 ಅತ್ಯುನ್ನತ ಸಾರ್ವಜನಿಕ ಮತ್ತು ಖಾಸಗಿ ವಿವಿಗಳಲ್ಲಿ ಒಂದಾಗಿದ್ದು, ಕರ್ನಾಟಕದ ಅತ್ಯುನ್ನತ ವಿಶ್ವವಿದ್ಯಾಲಯಗಳ ಪೈಕಿ 10ನೇ ಸ್ಥಾನದಲ್ಲಿದೆ ಎಂದು ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ತಿಳಿಸಿದ್ದಾರೆ. ಐದು ವರ್ಷಗಳ ಹಿಂದಿನ ಮಾಹಿತಿಯನ್ನು ಪರಿಗಣಿಸಿ, ಬೋಧನೆ, ಕಲಿಕೆ ಹಾಗೂ ಸಂಪನ್ಮೂಲಗಳು (ಟಿಎಲ್ಆರ್), ಸಂಶೋಧನೆ ಹಾಗೂ ವೃತ್ತಿಪರ ಅಭ್ಯಾಸಗಳು, ಪದವಿ ಫಲಿತಾಂಶಗಳು, ಹೊರಸೇರುವಿಕೆ, ಒಳಗೊಳ್ಳುವಿಕೆ ಮತ್ತು ಗ್ರಹಿಕೆ ಎಂಬ 5 ಮಾನದಂಡಗಳನ್ನು ಪರಿಗಣಿಸಿ ವಿವಿಗಳಿಗೆ ಶ್ರೇಯಾಂಕವನ್ನು ನೀಡಲಾಗಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನವದೆಹಲಿಯಲ್ಲಿ ರಾಷ್ಟ್ರ ಮಟ ದ ಶ್ರೇಯಾಂಕಗಳನ್ನು ಬಿಡುಗಡೆ ಮಾಡಿದ್ದಾರೆ.

10-06-2023
Vijayavani add Pg 02

10-06-2023
Hosadiganta Pg 02



ಈಗ ಕಾಳು, ಬೇಳೆಗೆ ಉತ್ತೇಜನ ಕಡಿಮೆ ಮಾಡಲಾಗಿದೆ. ಬೆಳೆ ತೆಗೆಯಲು ಹೆಚ್ಚಿನ ಖರ್ಚು ಮಾಡಬೇಕಾದ ಸ್ಥಿತಿ ಎದುರಾಗಿರುವುದರಿಂದ ದ್ವಿದಳ ಹಾಗೂ ಏಕದಳ ಬೆಳೆ ಬೆಳೆಯುವಲ್ಲಿ ರೈತರು ನಿರಾಸಕ್ತಿ ತೋರುತ್ತಿದ್ದಾರೆ. ಮೆಕ್ಕೆಜೋಳ, ಶುಂಠಿ ಹಾಗೂ ಅಡಿಕೆ ಬೆಳೆಯತ್ತ ರೈತರು ಹೆಚ್ಚು ಆಸಕ್ತಿ ಹೊಂದಿದ್ದಾರೆ.

ಏಕದಳ, ದ್ವಿದಳ ಧಾನ್ಯ ಬಿತ್ತನೆ ಬಗ್ಗೆ ಮುನಿಸು
ಲಾಭದಾಯಕ ಬೆಳೆಯ ಕಡೆಗೆ ಒಲವು

ಶುಂಠಿ, ಅಡಿಕೆಯತ್ತ ಬೆಳೆಗಾರರ ಚಿತ್ತ

• ಸತ್ಯನಾರಾಯಣ ಶುಂಬಳ್ಳಿ

ಶಿವಮೊಗ್ಗ: ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಏಕದಳ ಹಾಗೂ ದ್ವಿದಳ ಧಾನ್ಯ ಬಿತ್ತನೆ ಪ್ರದೇಶ ತೀರಾ ಕಡಿಮೆಯಾಗಿದ್ದು, ಮೆಕ್ಕೆಜೋಳ, ಶುಂಠಿ ಹಾಗೂ ಅಡಿಕೆ ಈ ಪ್ರದೇಶವನ್ನು ಆವರಿಸಿ ಕೊಂಡಿದೆ. ಬೆಳೆ ಮಾಡದೆ ಜಮೀನು ಖಾಲಿ ಬಿಡುತ್ತೇವೆ. ಆದರೆ ಕಾಳು, ಬೇಳೆ ಬೆಳೆಯುವುದಿಲ್ಲ ಎಂಬ ಮನಸ್ಥಿತಿಗೆ ಬೆಳೆಗಾರರು ಬಂದಿದ್ದಾರೆ. ದುಬಾರಿ ಕೂಲಿ, ಯಾಂತ್ರೀಕೃತ ಉಳುಮೆ, ಹೆಚ್ಚಾದ ರಸಗೊಬ್ಬರ ಬೆಲೆ, ಅಸಮಾನ ಮಳೆಯ ಹಂಚಿಕೆಯಿಂದಾಗಿ ಕಾಳುಗಳನ್ನು ಬೆಳೆಯಲು ರೈತರು ಹಿಂದೇಟು ಹಾಕುತ್ತಿದ್ದಾರೆ.

ಪೋಷಕಾಂಶಯುಕ್ತ ಆಹಾರ ಧಾನ್ಯ ಜನರಿಗೆ ನೀಡುವ ಸಲುವಾಗಿ ಈ ಹಿಂದೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕಾಳು, ಬೇಳೆ ಬೆಳೆಯಲು ವಿಶೇಷ ಒತ್ತು ನೀಡಿ ಸಹಾಯಧನ ನೀಡಿತ್ತು. ರಿಯಾಯ್ತಿಯಲ್ಲಿ ರಸಗೊಬ್ಬರ ನೀಡಿತ್ತು. ನ್ಯಾಯಬೆಲೆ ಅಂಗಡಿಗಳ ಮೂಲಕ ಕಾಳುಬೇಳೆ ನೀಡುವುದರ ಜತೆಗೆ, ಮಕ್ಕಳು, ಗರ್ಭಿಣಿಯರಿಗೂ ಕೂಡ ಅಂಗನವಾಡಿಗಳ ಮೂಲಕ ಕಾಳು ಗಳನ್ನು ಪೂರೈಕೆ ಮಾಡಲಾಗುತ್ತಿತ್ತು.





ದಿಗಂತ ವಿಶೇಷ

> **ಹೆಸರು, ಉದ್ದು, ಹುರಳಿ, ಅಲಸಂದೆ ಯನ್ನು ಮೆಕ್ಕೆಜೋಳ, ಸಣ್ಣ ಅಡಿಕೆ ಗಿಡಗಳ ಮಧ್ಯದಲ್ಲಿ ಅಂತರ್ ಬೆಳೆಯಾಗಿ ಬೆಳೆಯಲು ಉತ್ತೇಜನ ನೀಡಲಾಗುತ್ತಿದೆ. ದ್ವಿದಳ ಧಾನ್ಯಗಳನ್ನು ಬೆಳೆಯಲು ಪ್ರಚಾರ ಮಾಡಲಾಗುತ್ತಿದೆ. ಈ ಬಾರಿ ಮಳೆ ಕಡಿಮೆಯಾದರೆ ದ್ವಿದಳ ಹಾಗೂ ಏಕದಳ ಧಾನ್ಯ ಬೆಳೆಯಲು ಪ್ರೋತ್ಸಾಹ ನೀಡಲಾಗುತ್ತದೆ.**
> ■ ಡಾ. ಪೂರ್ಣಿಮಾ, ಜಂಟಿ ಕೃಷಿ ನಿರ್ದೇಶಕರು

ಈಗ ಕಾಳು, ಬೇಳೆಗೆ ಉತ್ತೇಜನ ಕಡಿಮೆ ಮಾಡಲಾಗಿದೆ. ಬೆಳೆ ತೆಗೆಯಲು ಹೆಚ್ಚಿನ ಖರ್ಚು ಮಾಡಬೇಕಾದ ಸ್ಥಿತಿ ಎದುರಾ ಗಿರುವುದರಿಂದ ದ್ವಿದಳ ಹಾಗೂ ಏಕದಳ ಬೆಳೆ ಬೆಳೆಯುವಲ್ಲಿ ರೈತರು ನಿರಾಸಕ್ತಿ ತೋರುತ್ತಿದ್ದಾರೆ.

ಭತ್ತ ಬೆಳೆ ಪ್ರದೇಶ ಕಡಿತ

ಏಕದಳ ಹಾಗೂ ದ್ವಿದಳ ಧಾನ್ಯ ಬಿತ್ತನೆ ಪ್ರದೇಶ ಮಾತ್ರ ಜಿಲ್ಲೆಯಲ್ಲಿ ಕಡಿಮೆಯಾಗಿಲ್ಲ. ಭತ್ತ ಬೆಳೆಯುವ ಪ್ರದೇಶ ಕೂಡ ಈ ಬಾರಿ ಕಡಿಮೆಯಾಗಿದೆ. ಕಳೆದ ವರ್ಷ 79,602 ಹೆಕ್ಟೇರ್ ನಲ್ಲಿ ಭತ್ತ ಬೆಳೆಯುವ ಗುರಿ ಹೊಂದಲಾಗಿತ್ತು. ಆದರೆ 79,131 ಹೆಕ್ಟೇರ್ ಸಾಧನೆಯಾಗಿತ್ತು. ಈ ಬಾರಿ 77,640 ಹೆಕ್ಟೇರ್‌ನಲ್ಲಿ ಭತ್ತ ಬೆಳೆಯುವ ಗುರಿ ಇಟ್ಟುಕೊಳ್ಳಲಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ 1962 ಹೆಕ್ಟೇರ್ ಭತ್ತ ಬೆಳೆ ಪ್ರದೇಶವೂ ಕಡಿಮೆಯಾಗಿದೆ.

ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 490 ಹೆಕ್ಟೇರ್‌ನಲ್ಲಿ ಏಕದಳ ಧಾನ್ಯ, 215 ಹೆಕ್ಟೇರ್‌ಗಳಲ್ಲಿ ದ್ವಿದಳ ಧಾನ್ಯ ಬೆಳೆಯ ಗುರಿ ನೀಡಲಾಗಿದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಪೋಷಕಾಂಶದ ಕೊರತೆ ನೀಗಿಸುವ ಸಲುವಾಗಿ ಕಾಳು, ಬೇಳೆ ಬೆಳೆಯಲು ಉತ್ತೇಜನ ನೀಡಲಾಗುತ್ತಿತ್ತು. ಆದರೆ ಈಗ ಉತ್ತೇಜನ ನೀಡಿದರೂ ಜಿಲ್ಲೆಯ ರೈತರಲ್ಲಿ ನಿರಾಸಕ್ತಿ ಉಂಟಾಗಿದೆ.ಬಯಲುಸೀಮೆಯ ಜಿಲ್ಲೆಗಳಿಗೆ ಹೋಲಿಸಿದರೆ ಶಿವಮೊಗ್ಗ ಜಿಲ್ಲೆಯಲ್ಲಿ ದ್ವಿದಳ ಹಾಗೂ ಏಕದಳ ಬೆಳೆ ಕಡಿಮೆ.

ಅದರಲ್ಲೂ ಶೇಂಗಾ, ಎಳ್ಳು, ಸೂರ್ಯಕಾಂತಿಯಂತಹ ಎಣ್ಣೆ ಕಾಳುಗಳನ್ನು ಬೆಳೆಯುತ್ತಿಲ್ಲ. ಹೆಚ್ಚಿನ ಮಳೆ ಈ ಜಿಲ್ಲೆಯಲ್ಲಿ ಬೀಳುವುದರಿಂದ ಆರೆನೀರಾವರಿ ಬೆಳೆ ಕಡಿಮೆ. ಆದರೂ ಶಿಕಾರಿಪುರ, ಸೊರಬ, ಶಿವಮೊಗ್ಗದ ಕೆಲವು ಹೋಬಳಿಗಳಲ್ಲಿ ಆರೆ ನೀರಾವರಿ ಬೆಳೆಗಳಿಗೆ ಅವಕಾಶವಿದ್ದರೂ ಬೆಳೆಯ

490 ಹೆಕ್ಟೇರ್‌ನಲ್ಲಿ ಈ ಬಾರಿ ಏಕದಳ ಧಾನ್ಯ ಬೆಳೆ ಬೆಳೆಯುವ ಗುರಿ

ಹೆಕ್ಟೇರ್‌ಗಳಲ್ಲಿ ಈ ಬಾರಿ ದ್ವಿದಳ ಧಾನ್ಯ ಬೆಳೆ ಬೆಳೆಯುವ ಗುರಿ **215**

79,602 ಹೆಕ್ಟೇರ್‌ನಲ್ಲಿ ಕಳೆದ ವರ್ಷ ಭತ್ತ ಬೆಳೆಯುವ ಗುರಿ ಹೊಂದಲಾಗಿತ್ತು

ಹೆಕ್ಟೇರ್‌ನಲ್ಲಿಷ್ಟೇ ಕಳೆದ ವರ್ಷ ಭತ್ತ ಬೆಳೆದಿದ್ದು **79,131**

77,640 ಹೆಕ್ಟೇರ್‌ನಲ್ಲಿ ಈ ಬಾರಿ ಭತ್ತ ಬೆಳೆಯುವ ಗುರಿ

ಕಳೆದ ವರ್ಷಕ್ಕಿಂತ ಈ ಬಾರಿ ಕಡಿತಗೊಂಡ ಭತ್ತ ಬೆಳೆ ಪ್ರದೇಶ **1,962**



ಪ್ರಮಾಣ ತೀರಾ ಕಡಿಮೆ ಇದೆ. ಈ ಬಾರಿ ಶುಂಠಿಗೆ ಅನಿರೀಕ್ಷಿತವಾಗಿ ಧಾರಣೆ ಹೆಚ್ಚಾಗಿರುವುದರಿಂದ ಶುಂಠಿ ಬಿತ್ತನೆಯ ಪ್ರದೇಶ ಕೂಡ ಹೆಚ್ಚಾಗಿದೆ. ದ್ವಿದಳ ಧಾನ್ಯಗಳನ್ನು ಬೆಳೆಯುವಂತಹ ಪ್ರದೇಶವನ್ನೇ ಶುಂಠಿ ಆವರಿಸಿಕೊಂಡಿದೆ. ರೈತರು ಕೂಡ ಲಾಭದಾಯಕ ಬೆಳೆಯ ಕಡೆಗೆ ಒಲವು ತೋರುತ್ತಿದ್ದಾರೆ.

Mango mela extended by 10 days till June 21

Jahnavi T. R.
BENGALURU


A file photo of visitors checking out mangoes in Bengaluru.

A much-awaited event in Bengaluru's calendar, the mango mela, which is organised at the Lalbagh Botanical Garden by the Horticulture Department, Karnataka State Mango Development, and Marketing Corporation (KSMDMC), has failed to draw visitors this year. Upon farmers' requests, on Friday, officials decided to extend the mela by 10 days, till June 21.

The mela was inaugurated on June 2 and was originally scheduled to culminate on Sunday. However, farmers at the mela reported that the number of visitors is down by over 50% this year due to the lack of publicity. While they would usually make around ₹15,000 of business in a day, this year, they are notching only ₹5,000.

"Due to elections, the mela was scheduled later than usual. KSMDMC officials could not call tenders due to the model code of conduct. But even after the dates were decided, they've not publicised the event citing lack of funds," said Ashok Reddy, a farmer from Kolar.

Another grower, Uday Kiran, from the same district, said that sales were not going as per their expectations as customers not visiting the mela.

"We are in a situation where we will have to throw away 20 to 30 crates of mangos. There is no publicity, no advertisement or exhibition to promote the mela. The officials did not even visit here. Even those outside Lalbagh would not know that the mela is happening inside," Mr. Reddy said.

More varieties

The participants at the mela also stated that this year, they brought in more varieties when compared to previous years and yet, it did not help them much.

Shyamala, a participant said, "We have good quality fruits here, but not many customers are coming. I would urge everyone to visit the mela," which had more than 10 varieties, including Himam Pasand, Benisha, and Dil Pasand for sale.

Officials of the KSMDMC provided no explanation as to why there was no publicity for the mela this year. However, mango farmers have been alleging that there are no funds with the Corporation as the department is not releasing as per requirement.

"We have paid heed to the requests of the farmers, and to ensure that they get good business, we have extended the mela by 10 days. We want more people to visit the stalls," said C.G. Nagaraju, Managing Director, KSMDMC.

On the other hand, customers who turned up at the mela on Friday, were happy with the variety on display. "I am a regular visitor to the mela. Compared to the previous year, this year, there is more variety. Malgova and Raspuri are my favourites, and along with them I have bought a few other varieties," said Suraj Sharma, from Basaveshwaranagar.

10-06-2023
Hindu Pg 04

ಮಾರುಕಟ್ಟೆಯಲ್ಲಿ ತುಟ್ಟಿ, ತೋಟದಂಗಳದಲ್ಲಿ ಅಗ್ಗ

ದ್ರಾಕ್ಷಿಯ ಸಿರಿತನ ಬೆಳೆಗಾರನಿಗಿಲ್ಲ!

■ ಬಿ.ಜಿ. ಚಮಕೇರಿ ಐಗಳಿ (ಬೆಳಗಾವಿ)
bgchamakeri@gmail.com

ಈ ಭಾಗದ ದ್ರಾಕ್ಷಿ ಬೆಳೆಗಾರರು ನಿರೀಕ್ಷಿಸುತ್ತಿರುವ ಅದೃಷ್ಟದ ದಿನಗಳು ಅದೇಕೋ ಬರುತ್ತಲೇ ಇಲ್ಲ. ನೂರೆಂಟು ಸಮಸ್ಯೆಗಳ ನಂಟು ಹರಿಯದ ದ್ರಾಕ್ಷಿ ಕೃಷಿಗೆ ಚೇತರಿಸಿಕೊಳ್ಳಲು ಅವಕಾಶ ಸಿಗದಂತೆ ಪ್ರಕೃತಿಯೂ ನಿರಂತರ ಗದಾಪ್ರಹಾರ ನಡೆಸುತ್ತಿದೆ.

ವಿಜಯಪುರ ಮತ್ತು ಅಥಣಿ ತಾಲೂಕು ಗುಣಮಟ್ಟದ ದ್ರಾಕ್ಷಿಗೆ ಹೆಸರುವಾಸಿ. ಅಥಣಿ ತಾಲೂಕಿನಲ್ಲಿ ಸುಮಾರು 6 ಸಾವಿರ ಹೆಕ್ಟೇರ್ ಪ್ರದೇಶ ದ್ರಾಕ್ಷಿ ಬೆಳೆಗೆ ಮೀಸಲಿದೆ. ಸರಾಸರಿ 1 ಹೆಕ್ಟೇರ್‌ಗೆ 25ರಿಂದ 30 ಟನ್ ದ್ರಾಕ್ಷಿ ಬೆಳೆಯಲಾಗುತ್ತಿದೆ. ವರ್ಷಂಪ್ರತಿ ಪ್ರಕೃತಿ ವಿಕೋಪದ ಹೊರತಾಗಿಯೂ 1.50 ಲಕ್ಷ ಟನ್ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಶೇ.25 ರಷ್ಟು ಮಾತ್ರ ಮಾರಾಟವಾಗಿ, ಉಳಿದದ್ದರಲ್ಲಿ ಬೇಧಾನಿ (ಒಣ ದ್ರಾಕ್ಷಿ) ಮಾಡಬೇಕಾದ ಅನಿವಾರ್ಯತೆಯಿದೆ.

ಬೆಳೆಗಾರರು ಬವಣೆ

ರಾಜ್ಯದಲ್ಲಿ ದ್ರಾಕ್ಷಿ ಹಣ್ಣು ಒಣ ದ್ರಾಕ್ಷಿ ಮಾರಾಟ ವ್ಯವಸ್ಥೆ ಸರಿಯಾಗಿಲ್ಲ. ಶೀತಲೀಕರಣಕ್ಕೆ ಮಹಾರಾಷ್ಟ್ರದ ಸಾಂಗಲಿ ಮತ್ತು ತಾಸಗಾಂವ್ ಶೈತ್ಯಾಗಾರಗಳ ಮೊರೆ ಹೋಗಬೇಕು. ಅಲ್ಲಿ ಯೋಗ್ಯ ಬೆಲೆಗಾಗಿ ವರ್ಷಗಟ್ಟಲೆ ಕಾಯಬೇಕು. ಆಗಲೂ ದರ ಸಿಗದಿದ್ದರೆ ಮುಂದಿನ ಪಡ ಬೆಳೆಸುವ ಖರ್ಚು, ಹಿಂದಿನ ಸಾಲ ಸರಿದೂಗಿಸಲು ಬಂದ ಬೆಲೆಗೆ ಮಾರಲೇಬೇಕು. ವಿದೇಶಿ ರಫ್ತು ವಿನಿಮಯ ನೀತಿ ಕಠಿಣವಾಗಿದೆ. ವಿಮಾ ಸೌಲಭ್ಯದ ರೂಪುರೇಷೆಗಳು ಅವೈಜ್ಞಾನಿಕವಾಗಿವೆ. ಬೆಂಬಲ ಬೆಲೆಯೂ ಸಿಗುತ್ತಿಲ್ಲ ಎಂಬುದು ಬೆಳೆಗಾರರ ಅಳಲು.

ವಿಮುಖರಾಗಲು ನಿರ್ಧಾರ

ಈ ಹಿಂದೆ 12ರಿಂದ 18 ಸಾವಿರ ಟನ್ ಬೇಧಾನಿ ತಯಾರಿಸಿದಾಗ ದರ ಸಿಗಲಿಲ್ಲ. 2022-2023ರಲ್ಲಿ ಕಾಯಿಯನ್ನೇ ಮಾರಿ ಬಿಡಲು ಕೆಲ ಬೆಳೆಗಾರರು ನಿರ್ಧರಿಸಿದಾಗ ಕೆಜಿಗೆ 15 ರೂ. ಕೂಡ ಬರಲಿಲ್ಲ. ಕೋವಿಡ್ ಅವಧಿ, ನಿರಂತರ ಪ್ರಕೃತಿ ವಿಕೋಪಗಳಿಂದ ಚೇತರಿಕೆಯೇ ಸಾಧ್ಯವಾಗುತ್ತಿಲ್ಲ. 15 ವರ್ಷಗಳಿಂದ ಹಾನಿ ರೈತರ ಬೆನ್ನು ಬಿದ್ದಿದೆ. ಬೇಸತ್ತ ಹಲವರು ದ್ರಾಕ್ಷಿ ಬೆಳೆಯುವ ಕಾಯಕದಿಂದಲೇ ವಿಮುಖರಾಗಲು ನಿರ್ಧರಿಸಿದ್ದಾರೆ.



ಸಾಂಗಲಿ ಮಾರುಕಟ್ಟೆಯಲ್ಲಿ ಬೇಧಾನಿ ಕೆಜಿಗೆ 105 ರಿಂದ 110 ರೂ. ವರೆಗೆ ಮಾರಾಟವಾಗಿದೆ. ಒಂದು ಕೆಜಿ ಬೇಧಾನಿ ಮಾಡಲು ದ್ರಾಕ್ಷಿ ಹಣ್ಣು ಬೆಳೆಸುವುದರಿಂದ ಹಿಡಿದು ಸಂಸ್ಕರಣೆ, ಮಾರಾಟದವರೆಗೆ 150 ರೂ. ಖರ್ಚು ಬರುತ್ತಿದೆ. ಕಾರಣ ದ್ರಾಕ್ಷಿ ಗಿಡಗಳನ್ನು ಕಿತ್ತೊಗೆಯಲು ನಿರ್ಧರಿಸಿದ್ದೇನೆ.
-ಜೆ.ಎಸ್. ಬಿರಾದಾರ
ಪ್ರಗತಿಪರ ದ್ರಾಕ್ಷಿ ಬೆಳೆಗಾರ

ಹೊಸ ಸರಕಾರ ಸ್ಪಂದಿಸೀತೆ?

ಮೇ 23ರಂದು ಅಥಣಿ ತಾಲೂಕಿನ ಐಗಳಿ, ಕೋಹಳ್ಳಿ, ಅಡಹಳ್ಳಿ ಮತ್ತು ಯಲಿಹಡಲಗಿಯಲ್ಲಿ ಭಾರೀ ಪ್ರಮಾಣದಲ್ಲಿ ಆಲಿಕಲ್ಲು ಮಳೆ ಬಿದ್ದು ದ್ರಾಕ್ಷಿ ಪಡಗಳಲ್ಲಿನ ಎಲೆ ಮತ್ತು ಕಡ್ಡಿಗಳು ಛಿದ್ರವಾದವು. ಗೊನೆ ತಯಾರು ಮಾಡಬೇಕಾದ ಕಡ್ಡಿಗಳೇ ಸಂಪೂರ್ಣ ನಾಶವಾಗಿವೆ. ಬೆಳೆಗಾರರ ಒತ್ತಾಯದ ಮೇರೆಗೆ ಮೇ 24 ಹಾಗೂ 31 ರಂದು ತೋಟಗಾರಿಕೆ ಅಧಿಕಾರಿಗಳು ಭೇಟಿ ನೀಡಿ ಬೆಳೆಗಾರರೊಂದಿಗೆ ಸಂವಾದ ನಡೆಸಿದರು. ಪ್ರಗತಿಪರ ದ್ರಾಕ್ಷಿ ಬೆಳೆಗಾರ, ಮಾಜಿ ಶಾಸಕ ಶಹಜಹಾನ ಡೊಂಗರಗಾಂವ ಬೆಳೆಗಾರರ ಬವಣೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರು. ಜೂ.1ರಂದು ವಿಜ್ಞಾನಿಗಳ ತಂಡವೂ ಭೇಟಿ ನೀಡಿದೆ. ಹೊಸ ಸರಕಾರದ ಅವಧಿಯಲ್ಲಾದರೂ ಇದಕ್ಕೆ ಪರಿಹಾರ ದೊರೆತೀತೇ ಎಂಬ ಪ್ರತೀಕ್ಷೆಯಲ್ಲಿ ಬೆಳೆಗಾರರಿದ್ದಾರೆ.

10-06-2023
V-karanataka Pg 05

ಮುಂಗಾರು ಎದುರಿಸಲು ಸನ್ನದ್ಧ

ಬೆಂಗಳೂರು: ಮುಂಗಾರು ಹಂಗಾಮು ಕೃಷಿ ಚಟುವಟಿಕೆಗಳು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.



ವಿಕಾಸಸೌಧದಲ್ಲಿ ಶುಕ್ರವಾರ ನೂತನ ಕಚೇರಿ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ''ಮುಂಗಾರು ಸಿದ್ಧತೆಯಲ್ಲಿ ಯಾವುದೇ ತೊಂದರೆಯಾಗದಂತೆ ಇಲಾಖೆಯ ಎಲ್ಲ ವಿಭಾಗಗಳ ಜಂಟಿ ನಿರ್ದೇಶಕರಿಂದ ಮಾಹಿತಿ ಪಡೆಯಲಾಗುತ್ತಿದೆ. ರೈತರಿಗೆ ಯಾವುದೇ ಅನಾನುಕೂಲವಾಗದಂತೆ ಸಕಾಲಕ್ಕೆ ಬಿತ್ತನೆ ಬೀಜ, ಗೊಬ್ಬರ ಪೂರೈಸಲು ತಯಾರಿ ಆಗುತ್ತಿದೆ,'' ಎಂದು ತಿಳಿಸಿದರು.

''ರೈತರ ಸಮಸ್ಯೆಗಳನ್ನು ಪರಿಹರಿಸಿ, ಸಾಧ್ಯವಾದ ಎಲ್ಲ ಅನುಕೂಲ ಮಾಡಿಕೊಡಲಾಗುವುದು. ರೈತರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಪ್ರಮಾಣಿಕತೆ ಮತ್ತು ಬದ್ಧತೆಯಿಂದ ಕೆಲಸ ಮಾಡಲಾಗುವುದು'' ಎಂದು ಹೇಳಿದರು.

ಆನಗತ್ಯ ವಿಚಾರ: ಗ್ಯಾರಂಟಿ ಯೋಜನೆಗಳು 'ರಾಜಕೀಯ ಗಿಮಿಕ್' ಎಂಬ ವಿಡಿಯೋ ವೈರಲ್ ವಿಚಾರಕ್ಕೆ ಪ್ರತಿಕ್ರಿಯಿಸಿ, ''ಅದು ಹೇಳಿಕೆ ಅಲ್ಲ. ಸಾಮಾನ್ಯ ಚರ್ಚೆ ವೇಳೆ ಸಾಂದರ್ಭಿಕವಾಗಿ ಬಂದಿರುವ ಮಾತು. ಅದೆಲ್ಲಾ ಆನಗತ್ಯ ವಿಚಾರ. ಗ್ಯಾರಂಟಿ ಯೋಜನೆಗಳಂತೂ ಆರಂಭವಾಗುತ್ತಿವೆ. ಭರವಸೆಯಂತೆ ಪಕ್ಷದ ಸರಕಾರ ನಡೆದುಕೊಂಡಿದೆ. ಅದಷ್ಟೇ ಮುಖ್ಯ'' ಎಂದರು.

10-06-2023
V-karanataka Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹಣ್ಣುಗಳ ರಾಜ ಮಾವಿನ ಹಣ್ಣಿನ ಆ ರುಚಿ, ವೆರೈಟಿ ಬೇರೆ ಹಣ್ಣುಗಳಲ್ಲಿ ಸಿಗುವುದು ಬಲು ಅಪರೂಪ. ಅದರಲ್ಲೂ ಮಾವಿನ ಪಾಕ ವೈವಿಧ್ಯತೆಗೆ ಯಾವುದೂ ಸಾಟಿಯಾಗದು. ಶುಭ ಕಾರ್ಯಗಳಲ್ಲಿ ಮಾವಿನ ಎಲೆಯ ತೋರಣ ಹೇಗೆ ಬೇಕೇ



• ಅಶ್ವಿನಿ ಸುನಿಲ್
ಫಲಾಮೃತ

ಬೇಸಿಗೆ ಕಾಲ ಬಂದರೆ ಸಾಕು ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರನ್ನು ಆಕರ್ಷಿಸುವ ಮಾವಿನ ಹಣ್ಣು ಎಲ್ಲಾ ಕಡೆ ಕಾಣ ಸಿಗುತ್ತದೆ. ವಸಂತನ ಆಗಮನದೊಂದಿಗೆ ಪ್ರಾರಂಭವಾಗುವ ಮಾವಿನ ಹಣ್ಣಿನ ಋತುವಿಗಾಗಿ ಮಕ್ಕಳಷ್ಟೇ ಏಕೆ ದೊಡ್ಡವರು ಕೂಡ ಕಾಯುತ್ತಿರುತ್ತಾರೆ.



ಆಹಾ.. ಮಾವು !

ಬೇಕೋ ಹಾಗೆಯೇ ಊಟದ ಜತೆ ಮಾವಿನಕಾಯಿಯ ಉಪ್ಪಿನಕಾಯಿ ಇಲ್ಲದಿದ್ದರೆ ಹೇಗೆ? ಮಲೆನಾಡಿನ ಅಪ್ಪೆ ಮಿಡಿ, ಜೀರಿಗೆ ಮಿಡಿ, ಕರಾವಳಿಯ ಕಾಟು ಮಾವಿನ ಮಿಡಿಗಳ ಉಪ್ಪಿನಕಾಯಿಗೆ ದೇಶ ವಿದೇಶಗಳನ್ನು ಸುತ್ತುವ ಭಾಗ್ಯ.

ಪರವೂರುಗಳಿಂದ ರಜೆಯಲ್ಲಿ ಊರಿಗೆ ಬಂದ ಆತ್ಮೀಯರಿಗೆ ಮರಳಿ ಹೋಗುವಾಗ, ಮಿಡಿ ಉಪ್ಪಿನಕಾಯಿ ಕೊಡುವ ವಾಡಿಕೆ ಇನ್ನೂ ಹಳ್ಳಿಗಳಲ್ಲಿ ಇದೆ.

ಇನ್ನು ಮಾವಿನ ಕಾಯಿಯನ್ನು ಉಪ್ಪು, ಖಾರ ಬೆರೆಸಿ ತಿನ್ನುವುದೇ ಮಜಾ. ಮಾವಿನಕಾಯಿ ಚಿತ್ರಾನ್ನ, ಮಾವಿನಕಾಯಿ ಚಟ್ನಿ, ಮಾವಿನಕಾಯಿ ಸಾರು, ಆಮ್ ಪನ್ನಾ ಮಾವಿನಕಾಯಿಯ ಋತುವಿನಲ್ಲಿ ಇರಲೇ ಬೇಕು. ಕುದಿಸಿದ ಉಪ್ಪು ನೀರಿನಲ್ಲಿ ಹಾಕಿ ಮಾವಿನ ಕಾಯಿಯನ್ನು ವರ್ಷವಿಡೀ ಸಂಗ್ರಹಿಸಬಹುದು ಮತ್ತು ಅದರಿಂದ ತಂಬುಳಿ, ಗೊಜ್ಜುಗಳನ್ನು ತಯಾರಿಸಬಹುದು.

ಮಾವಿನಕಾಯಿ ತುರಿದು ಒಣಗಿಸಿ ಪುಡಿ ಮಾಡಿ ಇಟ್ಟರೆ ಹೋಮ್ ಮೇಡ್ ಅಮ್ಚೂರ್ ಪೌಡರ್ ರೆಡಿ.

ಬಗೆ ಬಗೆ ಹೆಸರು : ಹಣ್ಣುಗಳ ರಾಜ ಮಾವಿನಹಣ್ಣಿನ ಬಗ್ಗೆ ಹೇಳಿದಷ್ಟು ಮುಗಿಯದು. ಬಂಗನಪಲ್ಲಿ, ತೋತಾಪುರಿ, ಆಲ್ಫೋನ್ಸಾ, ನೀಲಂ, ಹಿಮಾಯತ್, ಮಲ್ಲಿಕಾ, ಸಿಂದೂರಿ, ರಸಪುರಿ ಚಿನ್ನ ರಸಾಲು, ಪೆದ್ದ ರಸಾಲು, ಸುವರ್ಣ ರೇಖಾ, ದಶೇರಿ, ಕೇಸರ್, ಆಪುಸ್, ರತ್ನಗಿರಿ ಹೀಗೆ ಮಾವು ಹೆಸರಲ್ಲಷ್ಟೇ ಭಿನ್ನವಲ್ಲ,ರುಚಿ, ಬಣ್ಣಗಳಲ್ಲೂ ಭಿನ್ನ.

ವೆರೈಟಿ ಖಾದ್ಯ : ಕರಾವಳಿ, ಮಲೆನಾಡು ಭಾಗದ ಕಾಡು ಮಾವಿನ ಹಣ್ಣು ವೈವಿಧ್ಯಮಯ ಅಡುಗೆಗೆ ಉತ್ತಮ. ಬೇಸಿಗೆಯಲ್ಲಿ ಮರದಡಿಯಲ್ಲಿ ಬೀಳುವ ಕಾಡು ಮಾವಿನ ಹಣ್ಣುಗಳನ್ನು ಮಕ್ಕಳು ಹೆಕ್ಕಿ ತಂದರೆ, ಮಹಿಳೆಯರಿಗೆ ಹಣ್ಣಿನ ರಸ ತೆಗೆದು, ಬಿಸಿಲಿನಲ್ಲಿ ಒಣಗಿಸಿ ಮಾಂಬಳ ಮಾಡುವ ಸಡಗರ. ಹೀಗೆ ಮಾಂಬಳ ಮಾಡಿ ಇಟ್ಟರೆ ಅದನ್ನು ವರ್ಷವಿಡೀ ಹಲವು ಬಗೆಯಲ್ಲಿ ಉಪಯೋಗಿಸಬಹುದು.

ಮಕ್ಕಳು ತಿನ್ನಲು ಏನಾದರೂ ಕೊಡು ಎಂದಾಗ ಅವರಿಗೆ ಒಂದು ತುಂಡು ಮಾಂಬಳ ನೀಡಿ ಬಾಯಿ ಮುಚ್ಚಿಸಬಹುದು. ಫ್ರಿಜ್ ನಲ್ಲಿ ತರಕಾರಿ ಖಾಲಿಯಾದಾಗ ಮಾಂಬಳದ ಸಾಸಿವೆ , ಗೊಜ್ಜು, ರಸಾಯನ ತಕ್ಷಣಕ್ಕೆ ತಯಾರಿಸಬಹುದು.

ಕಾಡು ಮಾವಿನ ಹಣ್ಣಿನ ಗೊಜ್ಜು ಮೆಣಸ್ಕಾಯಿ, ಮಾವಿನ ಹಣ್ಣಿನ ಸಾರು, ಸಾಂಬಾರ್‌ನ ರುಚಿ ಸವಿದವರಿಗೇ ಗೊತ್ತು. ಅಕ್ಕಿಗೆ ತೆಂಗಿನ ತುರಿ, ಬೆಲ್ಲ, ಮಾವಿನ ಹಣ್ಣಿನ ರಸ ಸೇರಿಸಿ ಮಾವಿನ ಹಣ್ಣಿನ ಹಾಲ್ಬಾಯಿ ಅಥವಾ ಹಲ್ವಾ ತಯಾರಿಸಬಹುದು. ಮಾವಿನ ಹಣ್ಣಿನ ರಸಾಯನ ಅಥವಾ ಸೀಕರಣೆ ಚಪಾತಿ, ಪೂರಿ, ನೀರು ದೋಸೆ, ಶಾವಿಗೆ, ಕಡುಬಿನ ಜೊತೆ ಒಳ್ಳೆಯ ಕಾಂಬಿನೇಷನ್.

ಮಾವಿನ ಹಣ್ಣಿನ ಮಿಲ್ಕ್ ಶೇಕ್, ಶ್ರೀಖಂಡ್, ಐಸ್ಕ್ರೀಮ್‌ಗಳು ಬೇಸಿಗೆಯಲ್ಲಿ ಮಾವು ಪ್ರಿಯರ ಮನ ತಣಿಸುತ್ತದೆ. ಮಲೆನಾಡು, ಕರಾವಳಿಯ ಕಡೆ ಮಾವಿನ ಹಣ್ಣಿನ ಸೀಸನ್ ನಲ್ಲಿ ಯಾವುದೇ ಸಮಾರಂಭ ಇರಲಿ ಊಟದ ಕೊನೆಯಲ್ಲಿ ಮಾವಿನ ಹಣ್ಣಿನ ರಸಾಯನ ಬೇಕೇ ಬೇಕು. ಮಾವಿನ ಹಣ್ಣಿನಲ್ಲಿ ಹೆಸರು, ರುಚಿ ಖಾದ್ಯಗಳಲ್ಲಿ ಮಾತ್ರಾ ವೈವಿಧ್ಯತೆಯಲ್ಲ,ತಿನ್ನುವುದರಲ್ಲೂ ವೈವಿಧ್ಯತೆ ಕಾಣಬಹುದು.



ಕೆಲವರು ಸಿಪ್ಪೆ ತೆಗೆದು ತಿಂದರೆ ಕೆಲವರು ಸಿಪ್ಪೆ ಸಮೇತ ತಿನ್ನುವವರು. ಕೆಲವರು ಹೋಳುಗಳನ್ನಾಗಿ ಕತ್ತರಿಸಲು ಇಷ್ಟಪಟ್ಟರೆ, ಮತ್ತೆ ಕೆಲವರು ರಸ ಹೀರುತ್ತಾ ತಿನ್ನುವವರು. ಹಣ್ಣಿನ ಸಾರ ಸ್ವಲ್ಪವೂ ಇರದಂತೆ ಗೊರಟನ್ನು ನೆಕ್ಕುವವರು ಇದ್ದಾರೆ. ಅದೇನೇ ಇರಲಿ ಕೈ ಬಾಯಿಗೆಲ್ಲಾ ಮೆತ್ತಿಕೊಂಡು ಮಾವಿನ ಹಣ್ಣು ತಿನ್ನುವ ಮಕ್ಕಳನ್ನು ನೋಡುವುದೇ ಸುಂದರ.

ಆರೋಗ್ಯ ವೃದ್ಧಿಗೆ ಮಾವಿನ ಹಣ್ಣು : ಮಾವಿನ ಹಣ್ಣಿನಲ್ಲಿ ನಾರಿನಂಶ ಹೇರಳವಾಗಿರುವ ಕಾರಣ ಮಲಬದ್ಧತೆಯ ನಿವಾರಣೆಯಲ್ಲಿ ಸಹಕಾರಿ. ಮಾವಿನ ಹಣ್ಣಿನಲ್ಲಿರುವ ಆಂಟಿ ಆಕ್ಸಿಡೆಂಟ್ ಗಳು ಚರ್ಮದ ಆರೋಗ್ಯವನ್ನು ಕಾಪಾಡುತ್ತದೆ. ಕಣ್ಣಿನ ಮತ್ತು ಹೃದಯದ ಆರೋಗ್ಯವನ್ನು ಕಾಪಾಡುವುದು ಮಾತ್ರವಲ್ಲದೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಎಲ್ಲರೂ ಇಷ್ಟಪಟ್ಟು ತಿನ್ನುವ ಮಾವಿನ ಹಣ್ಣುಗಳನ್ನು ಮಾಗಿಸಲು ರಾಸಾಯನಿಕಗಳನ್ನು ಬಳಸುವುದು ಇಂದು ಸಾಮಾನ್ಯವಾಗಿದೆ. ಕಾರ್ಬೈಡ್ ಯುಕ್ತ ಹಣ್ಣನ್ನು ಸೇವಿಸುವುದರಿಂದ ಚರ್ಮದ ಸಮಸ್ಯೆ, ಅಲರ್ಜಿ, ಕ್ಯಾನ್ಸರ್‌ನಂತಹ ಹಲವು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಮಾವಿನ ಹಣ್ಣು ಸೇರಿದಂತೆ ಯಾವುದೇ ಹಣ್ಣನ್ನು ಬಳಸುವ ಮೊದಲು ಚೆನ್ನಾಗಿ ತೊಳೆಯುವುದು ಮುಖ್ಯ.

ಕ್ಷೇಮಸಮಾಚಾರ

ತರಕಾರಿ ನೀ ಬಲು ಉಪಕಾರಿ !



ಮಾನವನ ದೈಹಿಕ ಶಕ್ತಿಗೆ, ಆರೋಗ್ಯಕ್ಕೆ, ಅನ್ನ ಮತ್ತು ವ್ಯಂಜನಗಳ ಜೊತೆಗೆ ತರಕಾರಿಗಳ ಸೇವನೆ ಅತ್ಯವಶ್ಯ. ವೈದ್ಯರು ಕೂಡ ರೋಗಿಗಳಿಗೆ, ಕೃಶಕಾಯರಿಗೆ ತರಕಾರಿಗಳನ್ನು ಹೆಚ್ಚು ಸೇವಿಸಲು ಹೇಳುತ್ತಾರೆ. ಯಾವ ತರಕಾರಿಗಳು ಯಾವ ರೀತಿ ಉಪಯುಕ್ತವೆಂದು ಮಾಹಿತಿ ಇಲ್ಲಿದೆ

- ಸುವರ್ಣಗಡ್ಡೆಯ ಸೇವನೆಯಿಂದ ಮಲಬದ್ಧತೆ ನಿವಾರಣೆಯಾಗಿ ಮೂಲವ್ಯಾಧಿ ಸಮೀಪವೂ ಸುಳಿಯುವುದಿಲ್ಲ.
- ಸಿಹಿಗುಂಬಳಕಾಯಿ ಸೇವಿಸುವುದರಿಂದ ದೇಹದ ಅಧಿಕ ಉಷ್ಣ, ಪಿತ್ತ ಕಡಿಮೆಯಾಗುತ್ತದೆ.
- ಬದನೆಕಾಯಿ ದೇಹವನ್ನು ತಂಪಾಗಿರಿಸುವುದರೊಂದಿಗೆ ನೆನಪಿನ ಶಕ್ತಿಯನ್ನು ವೃದ್ಧಿಸುತ್ತದೆ.
- ಹೊಟ್ಟೆಯಲ್ಲಿನ ಹುಳಗಳನ್ನು ಪಡುವಲಕಾಯಿ ನಾಶಗೊಳಿಸಿ ವಾತ, ಪಿತ್ತ, ಕಫಗಳನ್ನು ಮಾಯ ಮಾಡುತ್ತದೆ.
- ಆಲೂಗೆಡ್ಡೆ ಚರ್ಮರೋಗಗಳನ್ನು ಹೊಡೆದೋಡಿಸಿ ದೇಹಕ್ಕೆ ಸದೃಢತೆಯನ್ನು ಕೊಡುತ್ತದೆ.
- ಮಧುಮೇಹ ಆರ್ಥಾತ್ ಸಕ್ಕರೆ ಕಾಯಿಲೆಗೆ ಪಡುವಲಕಾಯಿ ಸರ್ವೋತ್ತಮ. ಇದರಿಂದ ಹೊಟ್ಟೆಯಲ್ಲಿನ ಹುಳಗಳು ಸಾಯುತ್ತವೆ.
- ಎಲೆಕೋಸಿನ ಸೇವನೆಯಿಂದ ಕರುಳಿನ ಹುಣ್ಣು, ಎದೆನೋವು, ವಾಯುಬಾಧೆ ನಿವಾರಣೆಯಾಗುತ್ತದೆ.
- ಹುರುಳಿಕಾಯಿ ಯಕೃತ್ತಿನಲ್ಲಿನ ಉಷ್ಣತೆಯನ್ನು ನೀಗಿಸಿ ನರ ಹಾಗೂ ಮೂಳೆಗಳನ್ನು ಬಲಗೊಳಿಸುತ್ತದೆ.
- ದೇಹದೊಳಗಿನ ಕ್ರಿಮಿಗಳ ನಾಶ, ರಕ್ತ ಶುದ್ಧೀಕರಣ, ನೇತ್ರದೋಷಗಳಿಗೆ ನಿತ್ಯ ಈರುಳ್ಳಿ ಸೇವನೆ ಬಲು ಉಪಕಾರಿ.
- ಚಪ್ಪರದ ಅವರೆಕಾಯಿ ಹಸಿವನ್ನು ಹೆಚ್ಚಿಸಿ ನರಗಳನ್ನು ಬಲವಾಗಿಸುವುದರೊಂದಿಗೆ ಕರುಳಿನ ಕ್ಷೇಮವನ್ನು ಕಾಯುತ್ತದೆ.
- ಹಲಸಿನಕಾಯಿ ಮೆದುಳನ್ನು ಬಲಗೊಳಿಸಿ ವೀರ್ಯ ವೃದ್ಧಿಯಾಗುವಂತೆ ಮಾಡುತ್ತದೆ.
- ಅತ್ಯಂತ ಅವಶ್ಯ ತರಕಾರಿ ಗಜ್ಜರಿ. ಇದರಿಂದ ರೋಗಾಣುಗಳ ನಾಶ, ರಕ್ತ ಶುದ್ಧೀಕರಣ, ದೃಷ್ಟಿವರ್ಧನೆ, ಜೊತೆಗೆ ಕರುಳು, ಜೀರ್ಣಾಂಗ, ಯಕೃತ್ತುಗಳ ವ್ಯವಸ್ಥೆಯನ್ನು ಬಲಯುತಗೊಳಿಸುತ್ತದೆ.

•ಕೆ.ಶ್ರೀನಿವಾಸರಾವ್. ಹರಪನಹಳ್ಳಿ.

10-06-2023
Viswavani add Pg 02

10-06-2023
Viswavani add Pg 02

ಕಬ್ಬು ಬೆಳೆಗಾರರಿಗೆ ಸ್ಪಂದಿಸದ ಸಕ್ಕರೆ ಕಾರ್ಖಾನೆಗಳು

ಪಾವತಿಯಾಗದ ₹ 1,545 ಕೋಟಿ ಬಿಲ್

• ಸಂತೋಷ ಈ. ಚಿನಗುಡಿ

ಬೆಳಗಾವಿ: ರಾಜ್ಯದ ಹಲವು ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ನೀಡಬೇಕಾದ ₹ 595 ಕೋಟಿ ಬಿಲ್ ಇನ್ನೂ ಬಾಕಿ ಉಳಿಸಿಕೊಂಡಿವೆ. ಎಫ್‌ಆರ್‌ಪಿ ಮೇಲಿನ ಹೆಚ್ಚುವರಿ ಹಣ ಸೇರಿ ಒಟ್ಟು ₹ 1,545 ಕೋಟಿ ರೈತರ ಕೈ ಸೇರಬೇಕಿದೆ.

ರಾಜ್ಯದಲ್ಲಿ 74 ಸಕ್ಕರೆ ಕಾರ್ಖಾನೆಗಳು ಚಾಲ್ತಿಯಲ್ಲಿವೆ. ಇದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು 27 ಕಾರ್ಖಾನೆಗಳಿವೆ. ಬಾಗಲಕೋಟೆ, ವಿಜಯಪುರ, ಕಲಬುರಗಿ, ಮಂಡ್ಯ ಜಿಲ್ಲೆಗಳ ಕಾರ್ಖಾನೆಗಳೂ ಬಿಲ್ ಬಾಕಿ ಉಳಿಸಿಕೊಂಡಿವೆ.

ಕಳೆದ ಹಂಗಾಮಿನಲ್ಲಿ 6.80 ಕೋಟಿ ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿದ್ದು, 59.8 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಲಾಗಿದೆ. 'ರಿಕವರಿ' ಕೂಡ 9.91ರಷ್ಟು ಇದೆ. ಮೊದಲ ಕಂತಿನಲ್ಲಿ ₹19.37 ಸಾವಿರ ಕೋಟಿ ಬಿಲ್ ನೀಡಲಾಗಿದೆ. ಆದರೆ, ಎರಡನೇ ಕಂತಿನ ಹಣ ಕೊಡಲು ತಯಾರಿಲ್ಲ.



ಬೆಳಗಾವಿ ಹೊರವಲಯದಲ್ಲಿ ಬೆಳೆದ ಕಬ್ಬು (ಸಂಗ್ರಹ ಚಿತ್ರ)

ಪ್ರಜಾವಾಣಿ ವಿಶೇಷ

'ಕಬ್ಬು ಪೂರೈಸಿದ 15 ದಿನಗಳ ಒಳಗೆ ಪೂರ್ಣ ಬಿಲ್ ಪಾವತಿಸಬೇಕು ಎಂಬುದು ನಿಯಮ. ಇಲ್ಲದಿದ್ದರೆ ಪ್ರತಿ ಟನ್ ಕಬ್ಬಿಗೆ ಶೇ 18ರಷ್ಟು ಬಡ್ಡಿ ಸೇರಿಸಿ ಬಿಲ್ ನೀಡಬೇಕು. ಆದರೆ, ಇದು ಮಾತ್ರ ಕಾರ್ಯಗತ ಆಗುತ್ತಿಲ್ಲ' ಎಂದು ರೈತರು ಹೇಳುತ್ತಾರೆ.

₹ 950 ಕೋಟಿ ಹೆಚ್ಚುವರಿ ದರ: ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಕಳೆದ ಡಿಸೆಂಬರ್‌ನಲ್ಲಿ ಎಫ್‌ಆರ್‌ಪಿ ದರದ ಮೇಲೆ ಪ್ರತಿ ಟನ್ ಕಬ್ಬಿಗೆ ₹ 150 ಘೋಷಿಸಿದ್ದರು. ಇದರಿಂದ ರೈತರಿಗೆ ಅಂದಾಜು ₹ 950 ಕೋಟಿಗೂ ಅಧಿಕ ಹಣ ಬರುವುದು ಬಾಕಿ ಇದೆ. ಎರಡನೇ ಕಂತಿನ ಹಣ ಮತ್ತು ಎಫ್‌ಆರ್‌ಪಿ ಮೇಲಿನ ಹಣ ಸೇರಿದರೆ ₹ 1,545 ಕೋಟಿ ದಾಟುತ್ತದೆ.

'ನಿರಂತರ ಹೋರಾಟದ ಫಲವಾಗಿ ಹಿಂದಿನ ಸರ್ಕಾರವು ಹೆಚ್ಚುವರಿ ಹಣ ಘೋಷಿಸಿತ್ತು. ಆದರೆ, ಆ ಆದೇಶವನ್ನು ಪ್ರಶ್ನಿಸಿ ಕೆಲ ಕಾರ್ಖಾನೆಗಳು ಹೈಕೋರ್ಟ್ ಮೆಟ್ಟಿಲೇರಿವೆ. ಇದರಿಂದ ಬಿಲ್ ಬರುತ್ತದೆ ಎಂಬ ನಂಬಿಕೆಯೇ ಹೋಗಿದೆ' ಎಂದು ಕಬ್ಬು ಬೆಳೆಗಾರರು ಹೇಳುತ್ತಾರೆ.

ರಾಜ್ಯದ ಶೇ 90ರಷ್ಟು ಕಾರ್ಖಾನೆಗಳು ರಾಜಕಾರಣಿಗಳ ಮಾಲೀಕತ್ವದಲ್ಲಿವೆ. ಸಹಕಾರಿ ಕಾರ್ಖಾನೆಗಳ ಮೇಲೂ ಅವರ ಹಿಡಿತವಿದೆ
ಸಿದಗೌಡ ಮೋದಗಿ, ಅಧ್ಯಕ್ಷ, ಕೃಷಿಕ ಸಮಾಜದ ಬೆಳ್ಳಾ ಘಟಕ, ಬೆಳಗಾವಿ

ರೈತರ ಬಿಲ್ ಬಾಕಿ ಉಳಿದರೆ 15 ದಿನಕ್ಕೊಮ್ಮೆ ಕಾರ್ಖಾನೆಗಳಿಗೆ ನೋಟಿಸ್ ನೀಡುತ್ತೇವೆ. ಬಿಲ್ ಸಂದಾಯ ಮಾಡದವರಿಗೆ ಮತ್ತೆ ನೋಟಿಸ್ ಕೊಡಲಾಗುವುದು
ಡಾ. ಆರ್.ಬಿ. ಖಾಂಡಗಾವೆ ನಿರ್ದೇಶಕ, ಎಸ್‌ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ

ಪ್ರತಿ ಟನ್ ಕಬ್ಬಿಗೆ ₹ 150 ಪ್ರೋತ್ಸಾಹ ಧನ ನೀಡುವ ಕುರಿತು ಹೈಕೋರ್ಟ್‌ನಲ್ಲಿ ಹಾಕಿದ ತಕರಾರು ಅರ್ಜಿ ಹಿಂಪಡೆಯಬೇಕು
ಕುರಬೂರು ಶಾಂತಕುಮಾರ, ಅಧ್ಯಕ್ಷ, ರಾಜ್ಯ ಕಬ್ಬು ಬೆಳೆಗಾರರ ಸಂಘ

10-06-2023
Prajavani Pg 01